# 24ನೇ ವರ್ಷದ ಶ್ರೀಶಾರದಾ ಟ್ರೋಫಿ : ಮತ್ತೆ ಬೆಂಗಳೂರು ಮಡಿಲಿಗೆ


ಬಹುಮಾನ ವಿತರಣೆ


ಸೀನಿಯರ್ ವಿನ್ನರ್ಸ್

ಶ್ರೀಶಾರದಾ ಟ್ರೋಫಿ–2015 ದಿನಾಂಕ 15–02–2015ರಂದು ಉಡುಪಿಯ ಎಮ್.ಜಿ.ಎಮ್ ಕ್ರೀಡಾಂಗಣದಲ್ಲಿ ಬೆಳಿಗ್ಗೆಯಿಂದ ನಡೆದು ಅಂತಿಮವಾಗಿ ಪಡುಬಿದ್ರೆಯ ಉದಯಾದ್ರಿ–ಬಿ ತಂಡವನ್ನು ಸೋಲಿಸಿದ ಬೆಂಗಳೂರು ಎಫ್‌ಡಬ್ಲ್ಯೂಎಫ್ ತಂಡವು ಶ್ರೀಶಾರದಾ ಟ್ರೋಫಿಯನ್ನು ಸತತ 3ನೇ ವರ್ಷ ತನ್ನ ಬಗಲಿಗೆ ಹಾಕಿಕೊಂಡಿತು.

ಒಟ್ಟು 12 ತಂಡಗಳು ಪಾಲ್ಗೊಂಡ ಈ ಸೌಹಾರ್ದಕೂಟದಲ್ಲಿ ಮಲ್ಲಮಾರು, ನಂದಳಿಕೆ–ಎ ಮತ್ತು ಬಿ, ಬೆಂಗಳೂರು ಎಫ್‌ಡಬ್ಲ್ಯೂಎಫ್, ಬೆಳ್ತಂಗಡಿ–ಎ ಮತ್ತು ಬಿ, ಉಡುಪಿ, ಕರ್ವಾಲು, ಸುಬ್ರಹ್ಮಣ್ಯ ಸಭಾ ಪಡುಬಿದ್ರೆ, ಎನ್‌ಐಟಿಕೆ, ಉದಯಾದ್ರಿ ಎ ಮತ್ತು ಬಿ ಮೊದಲಾದ ತಂಡಗಳು ಭಾಗವಹಿಸಿದ್ದವು. ಬೆಳಿಗ್ಗೆ 10 ಗಂಟೆಗೆ ಪ್ರಾರಂಭಗೊಂಡ ಪಂದ್ಯಾಟವು ಮಧ್ಯಾಹ್ನದವರೆಗೆ ನಡೆದು ಊಟದ ನಂತರ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನೆರವೇರಿತು. ಈ ವರ್ಷ ಪಂದ್ಯಕೂಟಕ್ಕೆ ಆಗಮಿಸಿರುವ ತಂಡಗಳು ಕಡಿಮೆಯಾಗಿತ್ತು. ವಿದ್ಯಾರ್ಥಿಗಳಿಗೆ ಪರೀಕ್ಷಾ ಕಾಲ ಅಲ್ಲದೆ ಇದೇ ದಿನ ಭಾರತ–ಪಾಕಿಸ್ತಾನ ಏಕದಿನ ಪಂದ್ಯಾಟವು ಬೆಳಿಗ್ಗೆಯಿಂದಲೇ ಪ್ರಾರಂಭಗೊಂಡಿದ್ದು ಅದನ್ನು ವೀಕ್ಷಿಸುವ ಸಲುವಾಗಿಯೇ ಹೆಚ್ಚಿನ ಯುವಕರು ಈ ಪಂದ್ಯಕೂಟದಲ್ಲಿ ಪಾಲ್ಗೊಳ್ಳದಿರಲು ಕಾರಣವಾಗಿರಬಹುದೆಂದು ಮಾತಾಡಿಕೊಂಡದ್ದು ಕೇಳಿಬಂತು.

**ಶ್ರೀ ಶಾರದಾ ಟ್ರೋಫಿ 2015 ಫಲಿತಾಂಶ**

**ಶ್ರೀ ಶಾರದಾ ಟ್ರೋಫಿ 2015 ವಿನ್ನರ್ಸ್ : ಎಫ್.ಡಬ್ಲ್ಯೂ.ಎಫ್. ಬೆಂಗಳೂರು**
**ಶ್ರೀ ಶಾರದಾ ಟ್ರೋಫಿ 2015 ರನ್ನರ್ಸ್ : ಉದಯಾದ್ರಿ–ಬಿ ಪಡುಬಿದ್ರೆ**
**ಸೆಮಿಫೈನಲ್ ಕಳೆದುಕೊಂಡವರು : 1. ಬೆಳ್ತಂಗಡಿ–ಎ, 2. ಮಲ್ಲಮಾರು**

ಬೆಸ್ಟ್ ಬೌಲರ್ : **ಹರೀಶ್**, ಎಫ್.ಡಬ್ಲ್ಯೂ.ಎಫ್. ಬೆಂಗಳೂರು
ಬೆಸ್ಟ್ ಬ್ಯಾಟ್ಸಮನ್ : **ದೀಕ್ಷಿತ್**, ಎಫ್.ಡಬ್ಲ್ಯೂ.ಎಫ್. ಬೆಂಗಳೂರು
ಆಲ್‌ರೌಂಡರ್ (ಸವ್ಯಸಾಚಿ) : **ಅರ್ಜುನ್**, ಉದಯಾದ್ರಿ ಬಿ ಪಡುಬಿದ್ರೆ

**ಜೂನಿಯರ್ ಕ್ರಿಕೆಟರ್ಸ್**

**ವಿನ್ನರ್ಸ್ : ಎನ್.ಎಚ್.ಕೆ. ತಂಡ    ರನ್ನರ್ಸ್ : ಬೆಳ್ತಂಗಡಿ ತಂಡ**

**ಜ್ಯೂನಿಯರ್ ಕ್ರಿಕೆಟರ್ಸ್ :**

ಪ್ರತಿವರ್ಷದಂತೆ ಜ್ಯೂನಿಯರ್ಸ್ ಕ್ರಿಕೆಟ್‌ನಲ್ಲಿ ಎನ್.ಎಚ್.ಕೆ. ಮತ್ತು ಬೆಳ್ತಂಗಡಿ ತಂಡಗಳ ಮಧ್ಯೆ ಪಂದ್ಯಾಟವು ಮಧ್ಯಾಹ್ನದ ಊಟದ ನಂತರ ನಡೆದು ಎನ್.ಎಚ್.ಕೆ. ತಂಡವು ಬೆಳ್ತಂಗಡಿ ತಂಡವನ್ನು ಸೋಲಿಸಿ ಜಯಶಾಲಿಯಾಯಿತು. ಈ ಪಂದ್ಯಾಟವನ್ನು ಪಿ.ಎಮ್.ನಾಗರಾಜ ರಾವ್ ನಡೆಸಿಕೊಟ್ಟರು.

**ಊಟೋಪಚಾರ :**

ಬೆಳಿಗ್ಗೆ ಬಂದಿರುವ ತಂಡಗಳಿಗೆ ಎಂಜಿಎಂ ಮೈದಾನಕ್ಕೆ ಉಪಾಹಾರ ಒದಗಿಸಿದ್ದರೆ, ನಂತರ ಕುಡಿಯಲು ಬೇಕಾದ ಮಜ್ಜಿಗೆ ವ್ಯವಸ್ಥೆಯೂ ಇತ್ತು. ಮಧ್ಯಾಹ್ನದ ಊಟಕ್ಕೆ ಎಲ್ಲರಿಗೂ ಶ್ರೀ ಶಾರದಾ ಮಂಟಪದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಮತ್ತೆ ಕಾಫಿ, ಚಹಾ ವ್ಯವಸ್ಥೆ ಮೈದಾನಕ್ಕೆ ಬಂತು. ಒಟ್ಟಿನಲ್ಲಿ ಶ್ರೀ ಮಂಜುನಾಥ ಹೆಬ್ಬಾರರ ಈ ಎಲ್ಲ ವ್ಯವಸ್ಥೆಯೂ ಅಚ್ಚುಕಟ್ಟಾಗಿ ನೆರವೇರಿತು.

**ಪ್ರಾಯೋಜಕರು :**

ಈ ಬಾರಿಯೂ ಅಲೆವೂರು ಶ್ಯಾಮರಾವ್ ತನ್ನ ತಂದೆ ದಿ। ಭುಜಂಗರಾವ್ ಹಾಗೂ ತಾಯಿ ದಿ। ಶಾಂತಾದೇವಿಯವರ ಸ್ಮರಣಾರ್ಥ ರೂ.10,001/- ವಿಜೇತ ತಂಡಕ್ಕೆ ನೀಡಿರುತ್ತಾರೆ. ಹಾಗೆಯೇ ಕಳೆದ ಹಲವು ವರ್ಷದಿಂದ ದೇಣಿಗೆ ನೀಡುತ್ತಿರುವ ಡಾ। ಬಿ.ಎಚ್. ರಾಘವ ರಾವ್ ಬಪ್ಪನಾಡು, ಡಾ। ಬಿ.ಎಚ್.ಆನಂದ ರಾವ್ ಮಣಿಪಾಲ, ಡಾ। ಸಂದೀಪ್ ರಾವ್ ಮತ್ತು ಡಾ। ಪ್ರಶಾಂತ್ ಮೋಹನ್‌ರವರು ಒಟ್ಟಾಗಿ ಈ ಬಾರಿಯೂ ರನ್ನರ್ಸ್ ತಂಡಕ್ಕೆ ಹಾಗೂ ಸೆಮಿಫೈನಲ್ ಪ್ರವೇಶಿಸಿದ ತಂಡಗಳಿಗೆ ಮತ್ತು ಬೆಸ್ಟ್ ಬೌಲರ್, ಬೆಸ್ಟ್ ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್‌ರಿಗೆ ವೈಯಕ್ತಿಕ ಬಹುಮಾನ ನೀಡಿದ್ದಾರೆ. ಅಲ್ಲದೇ ಹೆಚ್ಚಿನ ಸಮಾಜ ಬಾಂಧವರು ಈ ಕಾರ್ಯಕ್ರಮಕ್ಕೆ ತಮ್ಮ ಪಾಲಿನ ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

**ಸಂಜೆ ಸಮಾರೋಪ ಸಮಾರಂಭ :**

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಆದಿತ್ಯ ಬಿರ್ಲಾ ಬಹುರಾಷ್ಟ್ರೀಯ ಕಂಪೆನಿ 'ಹಿಂಡಾಲ್ಕೋ' ಗ್ರೂಪ್‌ನ ಉಪಾಧ್ಯಕ್ಷರಾಗಿದ್ದು ಸ್ವಯಂ ನಿವೃತ್ತರಾಗಿರುವ ಶ್ರೀ ಇನ್ನಾ ಚಂದ್ರಕಾಂತ ರಾಯರು ವಿಜೇತರಿಗೆ ಬಹುಮಾನ ವಿತರಿಸುತ್ತಾ "ಸಂಘ ಸಂಸ್ಥೆಗಳ ಬೆಳವಣಿಗೆ ಇಂದಿನ ಎಲ್ಲಾ ಸಮಾಜದಲ್ಲಿ ಪ್ರಾಮುಖ್ಯ. ನಾವು ಚಿಕ್ಕವರಿರುವಾಗ ವಿದ್ಯೆ ಸಂಪಾದಿಸಲು ಪಟ್ಟ ಕಷ್ಟಗಳು ಈಗಿನ ಯುವಕರಿಗೆ ಇಲ್ಲ. ನಿಮ್ಮ ಎಲ್ಲರ ತಂದೆ ತಾಯಿಗಳು ವಿದ್ಯಾವಂತರಾಗಿದ್ದು, ಉದ್ಯೋಗದಲ್ಲಿದ್ದು ನಿಮ್ಮನ್ನು ಯೋಗ್ಯ ಪರಿಪೂರ್ಣ ಪ್ರಜೆಗಳಾಗುವಂತೆ ನೋಡಿಕೊಂಡಿದ್ದಾರೆ. ಆದ್ದರಿಂದ ನೀವು ನಮಗಿಂತಲೂ ಪುಣ್ಯವಂತರು. ಯೋಗ್ಯ ವಿದ್ಯಾಭ್ಯಾಸವನ್ನು ಪಡೆದು, ಉದ್ಯೋಗಿಗಳಾಗಿ ನೀವು ಸಮಾಜದ ಋಣ ತೀರಿಸಲು ಪ್ರಯತ್ನಿಸಬೇಕು" ಎಂದು ಕರೆನೀಡಿದರು.

ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದು, "ಇಷ್ಟೊಂದು ಸಂಖ್ಯೆಯ ಯುವಕರು ಈ ದಿನ ಒಂದೇ ಮೈದಾನದಲ್ಲಿ ಒಟ್ಟಾಗುವುದು, ಪರಸ್ಪರ ಪರಿಚಯಸ್ಥರಾಗಿ ಆಟ ಆಡುವುದು, ಇದಕ್ಕೆಲ್ಲ ಆಸ್ಪದ ನೀಡಿದ ಉಡುಪಿಯ ಸಂಘವನ್ನು ಅಭಿನಂದಿಸಿ ಶುಭ ಹಾರೈಸಿದರು.

ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಎಲ್ಲರನ್ನು ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀ ಕೃಷ್ಣಮೂರ್ತಿ ರಾವ್ ಅಂಬಲಪಾಡಿ, ಯುವ ವೇದಿಕೆಯ ಸಂಚಾಲಕರಾದ ಶ್ರೀ ವಿಶ್ವನಾಥ ಶ್ಯಾನುಭಾಗ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ಸಂತೋಷ್ ರಾವ್ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಪಿ.ಎಮ್. ನಾಗರಾಜ ರಾವ್ ವಿಜೇತರ ಪಟ್ಟಿ ವಾಚಿಸಿದರು. ಶ್ರೀ ಪ್ರಭಾಕರ ಭಂಡಿ ಧನ್ಯವಾದ ನೀಡಿದರು. ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದರು.

ಶ್ರೀ ಪ್ರವೀಣ್ (ಬಿ.ಎಮ್. ಶಾಲಾ ಶಾರೀರಿಕ ಶಿಕ್ಷಕ), ಶ್ರೀ ಉಮೇಶ್ (ಸಾಂದೀಪನಿ ಹೈಸ್ಕೂಲ್ ಮಟ್ಟು), ಶ್ರೀ ಸದಾಶಿವ ಮಣಿಪಾಲ, ಶ್ರೀ ಉಮೇಶ್ ಮಣಿಪಾಲ ಮೊದಲಾದವರು ನಿರ್ಲಿಪ್ತ ಅಂಪೈರ್‌ಗಳಾಗಿ ಸೇವೆ ಸಲ್ಲಿಸಿದ್ದು ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಅಲ್ಲದೆ ನಮ್ಮ ಸಮಾಜದ ತಂಡಗಳಿಂದ ಆಗಮಿಸಿದ ಹಲವರು ಅಂಪೈರ್‌ಗಳಾಗಿ, ಸ್ಕೋರರ್‌ಗಳಾಗಿ ಅಲ್ಲದೆ ಇನ್ನಿತರ ಎಲ್ಲಾ ಕೆಲಸಗಳಲ್ಲಿ ಸಹಕಾರ ನೀಡಿದರು.

**ಕೃತಜ್ಞತಾರ್ಪಣೆ :**

**ಶ್ರೀಶಾರದಾ ಟ್ರೋಫಿ ಪಂದ್ಯಾಟಕ್ಕೆ ಆಗಮಿಸಿದ ಎಲ್ಲಾ ತಂಡದ ಆಟಗಾರರಿಗೆ, ದೂರದಿಂದ ಆಗಮಿಸಿದ ಸಮಾಜ ಬಾಂಧವರಿಗೆ, ಪ್ರಾಯೋಜಕತ್ವ ನೀಡಿದ ಮಹನೀಯರಿಗೆ, ಪಂದ್ಯಾಟಕ್ಕೆ ಸಹಕರಿಸಿದ ಕಾರ್ಯಕರ್ತರಿಗೆ, ಸರ್ವವಿಧದಲ್ಲಿ ವ್ಯವಸ್ಥೆಗೊಳಿಸಿದ ಶ್ರೀ ಮಂಜುನಾಥ ಹೆಬ್ಬಾರರಿಗೆ, ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀಪ್ರಫುಲ್ಲಚಂದ್ರ ರಾವ್ ಮತ್ತು ಸರ್ವಸದಸ್ಯರು ಅನಂತ ಕೃತಜ್ಞತೆಯನ್ನು ಅರ್ಪಿಸುತ್ತಾರೆ.**




ಇದೇ ತಿಂಗಳ ತಾರೀಕು 25ರಿಂದ
ಯಕ್ಷಗಾನ ಹಿಮ್ಮೇಳಚೆಂಡೆವಾದಕ ಕಲಾವಿದನಾಗಿ
ಲಂಡನ್‌ಗೆ ತೆರಳಲಿರುವ ಕಲಾಸಂಘಟಕ, ಛಾಯಾಚಿತ್ರಗಾರ
**ಎಂ ದೇವಾನಂದಭಟ್** ಬೆಳುವಾಯಿ
ಇವರಿಗೆ ಹಾರ್ದಿಕ ಅಭಿನಂದನೆಗಳು.
ಇವರ ಪ್ರಯಾಣ ಸುಖಕರ ಮತ್ತು ಶುಭಫಲನೀಡಲಿ
ಎಂಬ ಹರಕೆ ಹಾರೈಕೆ ನಮ್ಮ ನಿಮ್ಮೆಲ್ಲರದು.
ಅಭಿಮಾನಿ ಹಿತೈಷಿಗಳು



ಸೀನಿಯರ್ ರನ್ನರ್ಸ್


ಜೂನಿಯರ್ ವಿನ್ನರ್ಸ್

# ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳು-ಒಂದು ವರದಿ



ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ-ಉಡುಪಿ ಇವರು ಮಹಿಳಾ ವೇದಿಕೆಯ ವತಿಯಿಂದ ದಿನಾಂಕ 15-02-2015ರಂದು ಮಕ್ಕಳು ಮತ್ತು ಮಹಿಳೆಯರಿಗಾಗಿ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು ಶ್ರೀಶಾರದಾ ಮಂಟಪದಲ್ಲಿ ಆಯೋಜಿಸಲಾಯಿತು.

10 ಗಂಟೆಗೆ ಸರಿಯಾಗಿ ಸದಸ್ಯೆಯರಾದ ಶ್ರೀಮತಿ ಸುನಂದ ಸಿ.ಎಸ್.ರಾವ್, ಶ್ರೀಮತಿ ಪ್ರತಿಮಾ ವಿಠಲ ರಾವ್, ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್, ಶ್ರೀಮತಿ ಪದ್ಮಾವತಿ ಗೋಪಾಲರಾವ್ ಮತ್ತು ಪ್ರಜ್ವಲ ಉಮೇಶ್ ರಾವ್ ಅವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕು। ಪ್ರಣಮ್ಯ ಭಂಡಿ ಪೆರ್ಡೂರ್ ಅವರು ಪ್ರಾರ್ಥನಾ ಗೀತೆಯನ್ನು ಹಾಡಿದರು. ಕ್ರೀಡಾ ಕಾರ್ಯಕ್ರಮವನ್ನು ಕು। ಅನುಪಮಾ ಭಂಡಿ ಪೆರ್ಡೂರ್ ಅವರು, ಮಹಿಳಾ ವೇದಿಕೆಯ ಸದಸ್ಯೆಯರ ಸಹಯೋಗದೊಂದಿಗೆ ಆಯೋಜಿಸಿದರು. ಅಪರಾಹ್ನ ಭೋಜನದ ನಂತರ ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರಜ್ವಲ ಉಮೇಶ್ ರಾವ್ ಮುಖ್ಯ ಅತಿಥಿಗಳಾಗಿದ್ದು, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಇದರ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸದಸ್ಯರಾದ ಶ್ರೀ ಜಯರಾಮ್ ರಾವ್, ಮಹಿಳಾ ವೇದಿಕೆಯ ಸಂಚಾಲಕಿಯಾದ ಶ್ರೀಮತಿ ಪ್ರೀತಿ ಎಸ್.ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಪ್ರತಿಭಾ ಭಂಡಿ ಸರ್ವರನ್ನೂ ಸ್ವಾಗತಿಸಿದರು. ಗಣ್ಯರು ಹಾಗೂ ಮುಖ್ಯ ಅತಿಥಿಗಳು ವಿಜೇತರಿಗೆ ಬಹುಮಾನ ವಿತರಿಸಿದರು. ಶ್ರೀ ಅರವಿಂದ್ ಕುಮಾರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಶ್ರೀಮತಿ ವಾಣಿ ಭಂಡಿ ವಿಜೇತರ ಯಾದಿಯನ್ನು ವಾಚಿಸಿದರು. ಶ್ರೀಮತಿ ಪ್ರೀತಿ ಎಸ್.ರಾವ್ ಧನ್ಯವಾದ ಸಮರ್ಪಿಸಿದರು ಮತ್ತು ಕು। ಅನುಪಮ ಭಂಡಿ ಕಾರ್ಯಕ್ರಮ ನಿರ್ವಹಿಸಿದರು.

**ಒಳಾಂಗಣ ಕ್ರೀಡಾ ಸ್ಪರ್ಧೆಗಳ ವಿಜೇತರ ಯಾದಿ**

1) 3 ವರ್ಷದೊಳಗಿನ ಮಕ್ಕಳಿಗೆ-ಕಿತ್ತಳೆ ಸಿಪ್ಪೆ ತೆಗೆದು ಸೋಳೆ ಬಿಡಿಸುವುದು : **ಲಹರಿ ಕೆ. ರಾವ್** (ಪ್ರಥಮ)

2) 3ರಿಂದ 5 ವರ್ಷದೊಳಗಿನ ಮಕ್ಕಳಿಗೆ-

ಅ) ಚಾಕಲೇಟ್ ರ್‍ಯಾಪರ್ ಹರಿಯುವುದು : **ಪ್ರಣತಿ ಅಶೋಕ್ ರಾವ್ ಬೈಲೂರು** (ಪ್ರಥಮ), **ಅದಿತಿ ದೀಪರ್ ಹೆಬ್ಬಾರ್ ಉಡುಪಿ** (ದ್ವಿತೀಯ), **ಲಹರಿ ಕಾರ್ತಿಕ್ ರಾವ್ ಮಣಿಪಾಲ** (ಸಮಾಧಾನಕರ)

ಆ) ಗೊಂಬೆ ಪಾಸ್ ಮಾಡುವುದು : **ಅದಿತಿ ದೀಪಕ್ ಹೆಬ್ಬಾರ್ ಉಡುಪಿ** (ಪ್ರಥಮ), **ಪ್ರಣತಿ ಅಶೋಕ್ ರಾವ್ ಬೈಲೂರು** (ದ್ವಿತೀಯ)

3) 1ರಿಂದ 3ನೇ ತರಗತಿ ವರೆಗಿನ ಮಕ್ಕಳಿಗೆ-

ಅ) ಬಾಟಲಿಗೆ ನೀರು ತುಂಬಿಸುವುದು : **ಅಬಿಜ್ಞ ರಾಧಕೃಷ್ಣ ರಾವ್-ಪಡುಪಣಂಬೂರು** (ಪ್ರಥಮ), **ಕೆ. ರವೀಶ್ ರಮೇಶ್ ರಾವ್-ಉಡುಪಿ** (ದ್ವಿತೀಯ)

ಆ) ಮಣಿ ಹೆಕ್ಕುವುದು : **ಮಯೂರ್ ಸುದರ್ಶನ್ ರಾವ್-ಕುಕ್ಕಿಕಟ್ಟೆ** (ಪ್ರಥಮ), **ಕೆ. ರವೀಶ್ ರಮೇಶ್ ರಾವ್-ಉಡುಪಿ** (ದ್ವಿತೀಯ)

4) 4ರಿಂದ 6ನೇ ತರಗತಿ ವರೆಗಿನ ಮಕ್ಕಳಿಗೆ-

ಅ) ಮಣಿ ಪೋಣಿಸುವುದು : **ಧನುಷ್ ದೇವದಾಸ್ ರಾವ್-ಹಿರಿಯಡ್ಕ**(ಪ್ರಥಮ), **ಅನೀಶ್ ಜನಕರಾಜ್ ರಾವ್-ಪಕ್ಷಿಕೆರೆ** (ದ್ವಿತೀಯ)

ಆ) ಪುಗ್ಗ ಊದಿ ಒಡೆಯುವುದು : **ಅನೀಶ್ ಜನಕರಾಜ್ ರಾವ್-ಪಕ್ಷಿಕೆರೆ** (ಪ್ರಥಮ), **ಪ್ರಣವ್ ಅಶೋಕ್ ರಾವ್-ಬೈಲೂರು** (ದ್ವಿತೀಯ)

5) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ-

ಅ) ನವಿಲಿಗೆ ಜುಟ್ಟು ಬಿಡಿಸುವುದು : **ಪ್ರಣಮ್ಯ ರವೀಂದ್ರ ಭಂಡಿ** (ಪ್ರಥಮ), **ಸೂರಜ್ ಶ್ರೀನಿವಾಸ ರಾವ್** (ದ್ವಿತೀಯ)

ಆ) ಸ್ಟ್ರಾದಿಂದ ನೀರು ಎಳೆಯುವುದು : **ವೈಷ್ಣವಿ ಮಂಜುನಾಥ ಹೆಬ್ಬಾರ್** (ಪ್ರಥಮ), **ಸ್ವಾತಿ ವಾಸುದೇವ ರಾವ್** (ದ್ವಿತೀಯ)

6) ಮಹಿಳೆಯರಿಗೆ- ಬಾಂಬಿಂಗ್ ದಿ ಟೌನ್ : **ಶ್ರೀಮತಿ ಪ್ರಜ್ವಲ ಉಮೇಶ್ ರಾವ್** (ಪ್ರಥಮ), **ಶ್ರೀಮತಿ ಜಯಲಕ್ಷ್ಮಿ** (ದ್ವಿತೀಯ)

7) 60 ವರ್ಷಕ್ಕೆ ಮೇಲ್ಪಟ್ಟ ಮಹಿಳೆಯರಿಗೆ-ಬಕೆಟಿಗೆ ಬಾಲ್ ಹಾಕುವುದು : **ಶ್ರೀಮತಿ ಸುಶೀಲ ರಾವ್ ಕುಂಜಿಬೆಟ್ಟು** (ಪ್ರಥಮ), **ಶ್ರೀಮತಿ ಯಶೋಧ ರಾವ್ ಮುಲ್ಕಿ** (ದ್ವಿತೀಯ)

ಸ್ಪರ್ಧಾಳುಗಳು ಇಲ್ಲದೇ ಇದ್ದ ಕಾರಣ ಪಿಯುಸಿಯಿಂದ ಪದವಿ ವರೆಗಿನವರಿಗೆ ಸ್ಪರ್ಧೆಯನ್ನು ಆಯೋಜಿಸಲಾಗಿರಲಿಲ್ಲ. ಕಾರ್ಯಕ್ರಮವನ್ನು ಸಫಲಗೊಳಿಸಲು ಸಹಯೋಗ ನೀಡಿದ ಸರ್ವರಿಗೂ ಧನ್ಯವಾದಗಳು.

## ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ



**ಡಾ। ವೈ. ಸುದರ್ಶನ ರಾವ್**

(ಕಳೆದ ಸಂಚಿಕೆಯಿಂದ...)

**ಪ್ರಶ್ನೆ : ಉಸಿರಾಡುವ ಗಾಳಿ ಹಾಗೂ ಆರೋಗ್ಯ**

ಅಲರ್ಜಿಯ ತೊಂದರೆ ಇರುವವರು ಹಾಗೂ ಇತರರಿಂದ ಉಸಿರಾಡುವ ಗಾಳಿಯ ಮೂಲಕ ತಮಗೆ ಹರಡುವ ಕಾಯಿಲೆಗಳ ಬಗ್ಗೆ ಕಾಳಜಿ ಇರುವವರು ಇಂತಹಾ ಸಂದರ್ಭದಲ್ಲಿ ಮಾಸ್ಕ್ ಧರಿಸಬಹುದು. ಕಲುಷಿತ ಗಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ವ್ಯಕ್ತಿಯೋರ್ವನಿಂದ ಮಾಸ್ಕ್ ಧರಿಸುವುದನ್ನು ಬಿಟ್ಟು ಬೇರೇನೂ ಮಾಡಲಾಗದ ಅಸಹಾಯಕ ಪರಿಸ್ಥಿತಿ ಇರುವುದನ್ನು ಗಮನಿಸಿರಿ (ನೀರು ಹಾಗೂ ಆಹಾರದ ವಿಷಯದಲ್ಲಿ ಸ್ವತಃ ಶುದ್ಧ ನೀರು ಹಾಗೂ ಆಹಾರ ಒದಗಿಸಿಕೊಳ್ಳಲು ಸಾಧ್ಯವಿದೆ). ಹಾಗಾಗಿ ನಮ್ಮ ಪರಿಸರದ ಗಾಳಿಯನ್ನು ಶುದ್ಧವಾಗಿಡುವಲ್ಲಿ ನಾವೆಲ್ಲರೂ ಸಾಮಾಜಿಕ ಬದ್ಧತೆ ಪ್ರದರ್ಶಿಸುವುದು ಅತೀಮುಖ್ಯ.

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

**ರಾಘವಾಂಕನು ರಚಿಸಿದ ಗ್ರಂಥಗಳು :** ಈತನು ಬರೆದ ಗ್ರಂಥಗಳಲ್ಲಿ 'ಹರಿಶ್ಚಂದ್ರ ಕಾವ್ಯ', 'ವೀರೇಶ ಚರಿತೆ', 'ಸಿದ್ಧರಾಮ ಪುರಾಣ', 'ಸೋಮನಾಥ ಚರಿತೆ' ಇವು ನಾಲ್ಕು ಮಾತ್ರ ಅಚ್ಚಾಗಿವೆ. ಉಳಿದ 'ಶರಭ ಚಾರಿತ್ರ' ಮತ್ತು 'ಹರಿಹರ ಮಹತ್ವ' ಇವುಗಳೆರಡು ಸಿಕ್ಕಿಲ್ಲ. ಸಿದ್ಧನಂಜೇಶ ಕವಿ ಬರೆದ 'ರಾಘವಾಂಕ ಚಾರಿತ್ರ' ದಿಂದ-'ಶರಭ ಚಾರಿತ್ರ'ದಲ್ಲಿ ಹಿರಣ್ಯಕಶಿಪುವಿನ ರಕ್ತಪಾನದಿಂದ ಮತ್ತನಾದ ನರಸಿಂಹನನ್ನು ವೀರಭದ್ರನು ಶರಭಾಕಾರದಿಂದ ಶಿಕ್ಷಿಸಿದ ಕಥೆಯೂ, 'ಹರಿಹರ ಮಹತ್ವದಲ್ಲಿ ಹಂಪೆಯ ಹರೀಶ್ವರನ ಮಾಹಾತ್ಮ್ಯವೂ ವರ್ಣಿತವಾಗಿರುವಂತೆ ತಿಳಿದುಬರುತದೆ.

**ವೀರೇಶ ಚರಿತೆ :** ವೀರಭದ್ರನು ದಕ್ಷಾಧ್ವರವನ್ನು ನಾಶಮಾಡಿದ ಕಥೆಯನ್ನು ರಾಘವಾಂಕನು ಈ ಕಾವ್ಯದಲ್ಲಿ ಹೇಳಿದ್ದಾನೆ. ನಿರೀಶ್ವರಯಾಗವನ್ನು ಕೈಗೊಂಡಿದ್ದ. ದಕ್ಷನು ತನ್ನ ಅಳಿಯನಾದ ಈಶ್ವರನನ್ನು ಅಪಮಾನಿಸಲಿಕ್ಕಾಗಿಯೇ ಅವನಿಗೆ ಹವಿಸ್ಸನ್ನೂ ಅರ್ಪಿಸದೆ, ಯಾಗಕ್ಕೆ ಕರೆಯಿಲ್ಲದೆ ಆಗಮಿಸಿದ್ದ ತನ್ನ ಪುತ್ರಿ ದಾಕ್ಷಾಯಿಣಿಯನ್ನೂ ಅಪಮಾನಿಸಿದನು. ಪರಿಣಾಮವಾಗಿ ರೊಚ್ಚಿಗೆದ್ದ ದಕ್ಷಪುತ್ರಿಯು ಸ್ಥಳದಲ್ಲಿಯೇ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ಸುದ್ದಿ ತಿಳಿದ ಶಿವನು ದಕ್ಷನ ನಾಶಕ್ಕಾಗಿ ತನ್ನ ಜಡೆಯ ಮೂಲಕವಾಗಿ ವೀರಭದ್ರಸ್ವಾಮಿಯನ್ನು ಸೃಷ್ಟಿಸಿ ಕಳುಹಿಸಿದನು. ಆ ವೀರಭದ್ರಸ್ವಾಮಿಯು ದಕ್ಷಾಧರ್ವವನ್ನೂ,ದಕ್ಷನನ್ನೂ ನಾಶಮಾಡಿದ ಕಥೆಯೇ 'ವೀರೇಶ ಚರಿತೆ'ಯಾಗಿದೆ. ಈ ಚಿಕ್ಕ ಕಾವ್ಯದಲ್ಲಿ ಇರುವುದು ಎರಡೇ ಸಂಧಿಗಳು. ಒಟ್ಟು 123 ಪದ್ಯಗಳು. ಇದು ರಾಘವಾಂಕನ 'ಮೊಸಲುಗವಿತೆ'. ಈ ಕೃತಿಗೆ ಪತಿ ಓರಂಗಲ್ಲಿನ ವಿಶ್ವೇಶ್ವರನೆಂದು ಕವಿಯೇ ಹೇಳಿರುವುದರಿಂದ ಈಚಿನ ವೀರಶೈವ ಗ್ರಂಥಗಳಲ್ಲಿ ರಾಘವಾಂಕ ಓರಂಗಲ್ಲಿಗೆ ಹೋಗಿ ಅಲ್ಲಿದ್ದ ಕುಕವಿಗಳನ್ನು ಸೋಲಿಸಿದನೆಂದಿರುವ ಕಥೆಯಲ್ಲಿ ಸತ್ಯಾಂಶವಿರುವಂತೆ ಊಹಿಸಬಹುದು. ಈ ಕಾವ್ಯದಲ್ಲಿರುವ ಷಟ್ಪದಿಯ ರಚನೆಯನ್ನು ತಿಳಿಸುವುದಕ್ಕಾಗಿ ಇಲ್ಲಿ ಒಂದು ಪದ್ಯವನ್ನು ಕೊಟ್ಟಿದೆ:-

ಪರಿಕಿಪೊಡೀ ಕೃತಿಗಾವುದು ಮೊದಲೆನೆ ಹಳಚುವ
ತೆರೆಯೊಳು ತಿರುಗುವ ಕರಿಯಕರಂಗಳ ಪುಚ್ಛೋತರ್ಕ
ಹತಿಯಿಂ ಚೆಲ್ಲಿದ ಮಣಿಗಳ ಬೆಳಗಿಂ ಶ್ವೇತದ್ವೀಪವನಣಕಿಸುತ।
ಶರನಿಧಿಯೊಪ್ಪುವುದಂತಾ ಶರನಿಧಿ ಪರಿವೃತ
ಧರೆಯೊಪ್ಪುವುದಂತಾ ಧರೆಯ ಶಿರೋಮಣಿವೋಲ್
ಸುರಗಿರಿಯುತ್ತರ ಭಾಗವನೇಂ ಬಣ್ಣಿಪೆನು॥

ವಾರ್ಧಕ ಷಟ್ಪದಿಯಂತೆಯೇ ಇದರ ಪ್ರತಿಪಾದದಲ್ಲಿಯೂ ಮಾತ್ರ ಸಂಖ್ಯೆಯಿದೆ. ಆದರೆ ಇಲ್ಲಿ ಐದು ಮಾತ್ರಗಳ ಗಣಗಳಿಗೆ ಬದಲಾಗಿ ನಾಲ್ಕು ಮಾತ್ರಗಳ ಗಣಗಳು ಉಪಯುಕ್ತವಾಗಿವೆ. 1,2,4,5ನೇ ಪಾದಗಳಲ್ಲಿ 4 ಮಾತ್ರಗಳ 8 ಗಣಗಳೂ ಇವೆ. ಒಂದು ಪ್ರತಿಯಲ್ಲಿ ಇದನ್ನು 'ಉದ್ದಂಡ ಷಟ್ಪದಿ' ಎಂದು ಕರೆಯಲಾಗಿದೆ.

ಇದು ವಾರ್ಧಕ ಷಟ್ಪದಿಯ ಇನ್ನೊಂದು ರೂಪವಾಗಿದೆ. ವಾರ್ಧಕ ಷಟ್ಪದಿಯಲ್ಲಿರುವಷ್ಟೇ ಮಾತ್ರೆಗಳಿದ್ದರೂ ಅದರಂತೆ ಓದಲು ಅಥವಾ ಹಾಡಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಪರಿವರ್ಧಿನಿ ಷಟ್ಪದಿಯಂತೆ ಇದನ್ನು ಓದಬಹುದಾಗುತ್ತದೆ

(ಮುಂದುವರಿಯುವುದು...)





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Krishna Rao
Ph : 2520652
Mob. : 9902029048



KISHAN
Studio & Video



Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

## ಮುಂಡ್ಕೂರು ಮುಲ್ಲಡ್ಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ : ವಾರ್ಷಿಕ ಮಹೋತ್ಸವ

ಮುಂಡ್ಕೂರು ಮುಲ್ಲಡ್ಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನದಲ್ಲಿ ದಿನಾಂಕ 28-01-2015ರಂದು ವಾರ್ಷಿಕ ಮಹೋತ್ಸವವು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು. ಮಧ್ಯಾಹ್ನ ಶ್ರೀ ಅನ್ನಪೂರ್ಣೇಶ್ವರೀ ದೇವಿಗೆ ಮಹಾಪೂಜೆಯ ನಂತರ ಅನ್ನ ಸಂತರ್ಪಣೆಯೂ ಜರುಗಿತು. ಸಂಜೆ ಶ್ರೀ ರಕ್ತೇಶ್ವರೀ, ನಂದಿಗೋಣ ಮೊದಲಾದ ದೇವರಿಗೆ ಪರ್ವ ನಂತರ ಸಾಮೂಹಿಕ ಹೂವಿನ ಪೂಜೆ, ರಂಗಪೂಜಾ ಸೇವೆ, ಭಜನಾ ಕಾರ್ಯಕ್ರಮಗಳೂ ನಡೆಯಿತು. ಭಕ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದೇವಿಯ ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.

## ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠ ಶಾಲೆ- ಅಮೃತ ಮಹೋತ್ಸವ

1895ರಲ್ಲಿ ಶೃಂಗೇರಿಯಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ 33ನೇ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರಿಂದ 120 ವರ್ಷಗಳ ಹಿಂದೆ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮವು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಆದೇಶ ಮತ್ತು ದಿವ್ಯ ಉಪಸ್ಥಿತಿಯಲ್ಲಿ ಫೆಬ್ರವರಿ 24ರಿಂದ 26ರವರೆಗೆ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶ್ರೀ ಗಣಪತಿ ಅಥರ್ವಶೀರ್ಷ ಹೋಮ, ವೇದಪಾರಾಯಣ, ಸರಸ್ವತೀ ಹೋಮ, ರುದ್ರಹೋಮ ನೆರವೇರಿತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಲವು ಧಾರ್ಮಿಕ ಉಪನ್ಯಾಸಗಳು, ಸಂಸ್ಕೃತ ಕವಿಗೋಷ್ಠೀ, ಕನ್ನಡ ಮತ್ತು ಸಂಸ್ಕೃತ ಅಷ್ಟಾವಧಾನ ಮೊದಲಾದುವುಗಳು ನೆರವೇರಿತು. ಜಗದ್ಗುರುಗಳು ಪ್ರತಿದಿನವೂ ಪ್ರತಿ ಕಾರ್ಯಕ್ರಮದಲ್ಲಿಯೂ ಉಪಸ್ಥಿತರಿದ್ದು, ಆಶೀರ್ವಚನ ನೀಡಿದರು.

## ಪಡುಬಿದ್ರಿಯಲ್ಲಿ ಸಂಗೀತ ಕಛೇರಿ



ಪಡುಬಿದ್ರಿಯ ಗಣಪತಿ ಪ್ರೌಢಶಾಲಾ ಹಳೆವಿದ್ಯಾರ್ಥಿ ಸಂಘ (ರಿ.) ತನ್ನ 42ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ ಸಂಗೀತ ಕಾರ್ಯಕ್ರಮದಲ್ಲಿ ಗಾಯಕಿ ಶ್ರೀಮತಿ ಚೈತ್ರಾ ಅಶ್ವಿನ್‌ಕುಮಾರ್ ಕರ್ವಾಲು (ಕರ್ವಾಲು ಅನಂತ ಪಟ್ಟಾಭಿರಾವ್ ಇವರ ಸೊಸೆ) ಇವರು ಸಂಗೀತ ಕಚೇರಿ ನಡೆಸಿಕೊಟ್ಟರು. ಕೀಬೋರ್ಡ್‌ನಲ್ಲಿ ಶ್ರೀ ಪ್ರಕಾಶ್ ರಾವ್ ಉಡುಪಿ, ತಬಲಾದಲ್ಲಿ ಶ್ರೀಕಾಂತ್ ಶೆಣೈ ಪಡುಬಿದ್ರಿ ಸಹಕರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಕಲಾವಿದರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

## ವಿಳಾಸ ಬದಲಾವಣೆ

**ಕೋಲ್ಪೆ ಗೋಪಾಲಕೃಷ್ಣ ರಾವ್**
**(ಜಿ.ಕೆ. ಕೋಲ್ಪೆ)**
ಮನೆ ನಂಬ್ರ 7-3-31-ಡಿ1
"ವೈಷ್ಣವಿ" (ಮೇಲಂತಸ್ತು),
ವಾದಿರಾಜ ರಸ್ತೆ, 2ನೇ ಕ್ರಾಸ್,
ಬೈಲಕೆರೆ, ಉಡುಪಿ-576101

## ಗೃಹ ಪ್ರವೇಶ

ಶ್ರೀಮತಿ ಶ್ರೀಮತಿ ಮತ್ತು ಶ್ರೀ ನಿರಂಜನ ರಾವ್ ಹೆರ್ಗ ಇವರು ಹೆರ್ಗ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಗೃಹ 'ಶ್ರೀ ದೇವಿಕೃಪಾ'ದ ಪ್ರವೇಶೋತ್ಸವವನ್ನು ದಿನಾಂಕ 21-01-2015ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

॥ ಶಾರದಾ ಶಾರದಾಂಭೋಜ ವದನಾ ವದನಾಂಬುಜೇ ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ ॥

### ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ಜಯ ನಾಮ ಸಂ।ರದ ಕುಂಭ ಮಾಸ ದಿನ ೨೯ ಸಲುವ ಫಾಲ್ಗುಣ ಬಹುಳ ಅಷ್ಟಮಿ ಮೀನ ಸಂಕ್ರಮಣ ತಾ.14-03-2015ನೇ ಶನಿವಾರ

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಯು. ಅರವಿಂದ ಕುಮಾರ್** — ಕಾರ್ಯದರ್ಶಿ
**ಯು. ಪ್ರಫುಲ್ಲಚಂದ್ರ ರಾವ್** — ಅಧ್ಯಕ್ಷರು

**ಕಾರ್ಯಕ್ರಮ :** *ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ*

ಸಮಾಜಬಾಂಧವರು ಇದನ್ನೇ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ

# ವೈವಾಹಿಕ ಬೆಳ್ಳಿಹಬ್ಬ



**ಶ್ರೀ ಸಾಂತೂರು ಜನಾರ್ದನರಾವ್**
ಮತ್ತು
**ಶ್ರೀಮತಿ ಶುಭಾ ಜನಾರ್ದನ ರಾವ್**

ಇವರು ತಮ್ಮ ವಿವಾಹದ ಬೆಳ್ಳಿ ಹಬ್ಬ ಸಂಭ್ರಮವನ್ನು ತಮ್ಮ ಆತ್ಮೀಯ ಬಂಧುಬಾಂಧವರೊಡಗೂಡಿ, ನಂದಿಕೂರಿನಲ್ಲಿರುವ ಸ್ವಗೃಹ ದೇವಿಕೃಪಾದಲ್ಲಿ ತಾ.28.12.2004ನೇ ಭಾನುವಾರ, ಗಣಹೋಮ, ಚಂಡಿಕಾ ಹೋಮ, ಸತ್ಯನಾರಾಯಣ ಪೂಜೆ ಮತ್ತು ದುರ್ಗಾನಮಸ್ಕಾರ ಪೂಜೆ ಗಳೊಂದಿಗೆ ವಿಜೃಂಭಣೆಯಿಂದ ಆಚರಿಸಿದರು.



**ಶ್ರೀ ಎನ್. ಉಮೇಶ್ ರಾವ್**
ಮತ್ತು
**ಶ್ರೀಮತಿ ರಾಜೇಶ್ವರಿ ರಾವ್**

ವೈವಾಹಿಕ ಜೀವನದ 25ನೇ ಮಹೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಹಾರ್ದಿಕ ಶುಭಾಶಯ ಸಲ್ಲಿಸುವ

**ಶ್ರುತಿ ವಿನೋದ್ ಕುಮಾರ್**
**ವಿನೋದ್ ಕುಮಾರ್**
**ಶ್ವೇತಾ ರಾವ್**
**ಸಮನ್ವಿ ರಾವ್ (ಮೊಮ್ಮಗಳು)**
**ಸಹೋದರ ಸಹೋದರಿಯರು**
**ಮತ್ತು ಬಂಧುಮಿತ್ರರು**

## ಶಿಕ್ಷಣ ಮತ್ತು ತರಬೇತಿ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು**
**ಶ್ರೀಶಾರದಾ ಮಂಟಪ, ಉಡುಪಿ-2**

**ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**
**ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ**
**CCE** ಮಾದರಿಯಲ್ಲಿ (80:20) ಪರೀಕ್ಷಾ ತರಬೇತಿ ಕಾರ್ಯಕ್ರಮ

**ತಾ.15-03-2015 (ರವಿವಾರ) ಸ್ಥಳ : ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.**
**ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ**

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

**ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.**

ಡಾ। ರವೀಂದ್ರನಾಥರಾವ್ ವೈ. (ಅಧ್ಯಕ್ಷರು) — ಪ್ರಭಾಕರ ಭಂಡಿ (ಸಂಚಾಲಕರು)

## ಶ್ರೀಶಾರದಾ ದೇವಸ್ಥಾನ



**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 2. ಫೋನ್ : 2520754**

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ ಶ್ರೀ ಮನ್ಮಥ ನಾಮ ಸಂ।ರದ ಚೈತ್ರ ಶುಕ್ಲ ತದಿಗೆಯಂದು ತಾ.22-03-2015ನೇ ಆದಿತ್ಯವಾರ ಸಂಜೆ ಗಂಟೆ 5-00ರಿಂದ

**ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ ಪ್ರತಿವರ್ಷದಂತೆ**

### ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ರೂ.125/-ನ್ನು ನೀಡಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ.

**- ಆಡಳಿತ ಮಂಡಳಿ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ ಶ್ರೀ ಮನ್ಮಥ ನಾಮ ಸಂ।ರದ ಚೈತ್ರ ಶುಕ್ಲ ಮೀನ ಮಾಸ ತಾ.21-03-2015ರಿಂದ ತಾ.29-03-2015ರ ವರೆಗೆ **ಕಿರುನವರಾತ್ರಿ ಮಹೋತ್ಸವವು** ಜರಗಲಿರುವುದು.

ತಮಗೆಲ್ಲರಿಗೂ ಆದರದ ಸ್ವಾಗತ — ಕಾರ್ಯದರ್ಶಿ

# ಶೃಂಗೇರಿ ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಗೆ ಅಮೃತ ಮಹೋತ್ಸವದ ಸಂಭ್ರಮ

- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ



ಸಸ್ಯ ಶ್ಯಾಮಲವಾದ ಗಿರಿಕಂದರಗಳಿಂದ ಪರಿಶೋಭಿಸುವ ಶೃಂಗೇರಿ ಕರ್ನಾಟಕದ ಕಾಶ್ಮೀರ; ಮಲೆನಾಡಿನ ಹೃದಯ. ಮಲಾಪಹಾರಿ ತುಂಗೆಯ ಜುಳು ಜುಳು ನಾದ ಒಂದೆಡೆಯಾದರೆ, ಮುಗಿಲಮಾಲೆಯೊಂದಿಗೆ ಸ್ಪರ್ಧಿಸುವ ಸಹ್ಯಾದ್ರಿ ಶ್ರೇಣಿ ಮತ್ತೊಂದು ಕಡೆ. ಪ್ರಕೃತಿದೇವಿ ತನ್ನೆಲ್ಲ ಸೌಂದರ್ಯವನ್ನು ಮುಚ್ಚುಮರೆ ಇಲ್ಲದೆ ಈ ನೆಲದ ಮೇಲೆ ಚೆಲ್ಲಿದ್ದಾಳೆ. ವಿಭಾಂಡಕ ಮುನಿಗಳ ತಪಸ್ಸು ಸಿದ್ಧಿಸಿದುದು ಈ ಕ್ಷೇತ್ರದಲ್ಲಿ. ಋಷ್ಯಶೃಂಗರು ಜನ್ಮ ತಳೆದುದು ಈ ನೆಲದಲ್ಲಿ. ಆದಿಶಂಕರರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ಮೊದಲನೆಯದೂ, ಅತ್ಯಂತ ಪ್ರಮುಖವೂ ಆದ ಶಾರದಾಪೀಠದಿಂದಲಾಗಿ ಶೃಂಗೇರಿಯ ಹೆಸರು ಇತಿಹಾಸದ ಪುಟಗಳಲ್ಲಿ ದಾಖಲೆಗೊಂಡಿತು. ನಾಗರಿಕತೆಯ ನಾಗಾಲೋಟದೊಡನೆ ಅಡಿ ಇಡದ ಈ ಪುಟ್ಟ ಊರು ಜಗತ್ತಿನಾದ್ಯಂತ ಆಸ್ತಿಕ ಜನಸ್ತೋಮದ ಊರ್ಧ್ವಗಾಮಿ ಚೇತನಕ್ಕೆ ಮಾರ್ಗದರ್ಶನ ನೀಡುವ ಆಧ್ಯಾತ್ಮಿಕ ಕೇಂದ್ರ. ಸನಾತನ ಧರ್ಮಗತತ್ತ್ವಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ, ಸಂದೇಹ, ವಿವಾದಗಳು ಉದ್ಭವಿಸಿದ ಸಂದರ್ಭದಲ್ಲೆಲ್ಲ ವ್ಯಾಖ್ಯಾನಪೀಠವೆಂದೇ ಪ್ರಸಿದ್ಧಿ ಪಡೆದ ಈ ಪೀಠವು ನೀಡುವ ತೀರ್ಮಾನ ಸರ್ವಮಾನ್ಯ ಮತ್ತು ಅಂತಿಮವೆಂದೇ ಪರಿಗಣಿಸಲ್ಪಡುತ್ತದೆ.

## ಪಾಠಶಾಲೆಯ ಸ್ಥಾಪನೆ

ಆಚಾರ್ಯ ಸುರೇಶ್ವರರಿಂದ ಪ್ರಾರಂಭಗೊಂಡ ಇಲ್ಲಿನ ಅವಿಚ್ಛಿನ್ನ ಗುರುಪರಂಪರೆಯಲ್ಲಿ ವಿದ್ಯಾಗತಪೋಮೂರ್ತಿಗಳಾದ ಮುವ್ವತ್ತೈದು ಮಂದಿ ಗುರುವರೇಣ್ಯರು ಆಗಿ ಹೋಗಿದ್ದಾರೆ. ಈಗ ಇಲ್ಲಿನ ವ್ಯಾಖ್ಯಾನಪೀಠದಲ್ಲಿ ವಿರಾಜಮಾನರಾಗಿರುವ ಶ್ರೀಶ್ರೀ ಭಾರತೀತೀರ್ಥಮಹಾಸ್ವಾಮಿಗಳವರು ಮುವ್ವತ್ತಾರನೆಯ ಯತಿವರ್ಯರು. ಈ ಗುರುಪರಂಪರೆಯಲ್ಲಿ ಮುವ್ವತ್ತಮೂರನೆಯವರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಮಹಾಸ್ವಾಮಿಗಳವರು ಶ್ರೀ ಶಂಕರರ ಪುನರವತಾರವೆಂದೇ ಪ್ರಸಿದ್ಧರು. 1879ರಿಂದ 1912ರವರೆಗೆ ವ್ಯಾಖ್ಯಾನ ಪೀಠವನ್ನಲಂಕರಿಸಿದ್ದ ಅವರು ಮಹಾತಪಸ್ವಿಗಳು; ಸನಾತನಧರ್ಮದ ಪುನರುತ್ಥಾಪಕರು. ಆದಿಶಂಕರರ ಅವತಾರ ಭೂಮಿಯಾದ ಕಾಲಟಿಯನ್ನು ಪುಣ್ಯಕ್ಷೇತ್ರವನ್ನಾಗಿ ಪರಿವರ್ತಿಸಿದವರು ಅವರು. ತುಂಗೆಯ ದಕ್ಷಿಣತೀರದಲ್ಲಿ 'ನೃಸಿಂಹವನ'ವೆಂಬ ಸುಂದರ ಆಶ್ರಮದ ಸ್ಥಾಪಕರೂ ಅವರೇ. ಸನಾತನ ಧರ್ಮ ಪ್ರಸಾರಕ್ಕೋಸ್ಕರ ಎರಡು-ಮೂರು ಬಾರಿ ದೇಶಸಂಚಾರ ಮಾಡಿದವರು ಅವರು. ಸಂಸ್ಕೃತದಲ್ಲಿ ತಲಸ್ಪರ್ಶಿಪಾಂಡಿತ್ಯ ಹೊಂದಿದ್ದ ಈ ಮಹಾಮಹಿಮರಿಂದ ಪಾದುಕೆಗಳನ್ನು ಪಡೆದುಕೊಂಡೊಯ್ದು ಪ್ರತಿಷ್ಠಾಪಿಸಿ, ಪಂಡಿತ ಮದನ ಮೋಹನ ಮಾಲವೀಯರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸರ್ವಕಲಾಶಾಲೆಯನ್ನು ಆರಂಭಿಸಿದ್ದರಂತೆ. ಕೇರಳದ ಕಾಲಟಿಯೇ ಶ್ರೀಶಂಕರಾಚಾರ್ಯರ ಜನ್ಮಭೂಮಿಯೆಂಬುದನ್ನು 'ಶ್ರೀ ಮಾಧವೀಯ ಶಂಕರದಿಗ್ವಿಜಯ'ದಲ್ಲಿ ಉಕ್ತವಾದ ಕೆಲವು ಲಕ್ಷಣಗಳಿಂದ ದೃಢಪಡಿಸಿ, ಅಲ್ಲಿ ಭಗವತ್ಪಾದ ಶಂಕರರ ಮತ್ತು ಶ್ರೀಶಾರದಾಂಬೆಯ ದೇವಾಲಯಗಳನ್ನೂ, ಶೃಂಗೇರಿ ಶಂಕರಮಠವನ್ನೂ ಸ್ಥಾಪಿಸಿದ ಕೀರ್ತಿ ಇವರದು. ಶಂಕರರ ಕೃತಿ ಶ್ರೇಣಿ ಪರಿಪೂರ್ಣವಾಗಿ ಬೆಳಕು ಕಂಡದ್ದು ಇವರಿಂದ. ವೇದ-ಶಾಸ್ತ್ರಗಳ ಕುರಿತು 'ಇದಮಿತ್ಥಂ' ಎಂದು ಅಧಿಕಾರವಾಣಿ ಹೊಂದಿದ್ದ ಇವರು ಮಾಡಿದ ಮಹಾತ್ಕಾರ್ಯಗಳಲ್ಲಿ ಶೃಂಗೇರಿ ಮತ್ತು ಬೆಂಗಳೂರಿನಲ್ಲಿ ಸಂಸ್ಕೃತ ಮಹಾಪಾಠಶಾಲೆಗಳ ಸ್ಥಾಪನೆ ಅತ್ಯಂತ ಪ್ರಮುಖವಾದುದು.

ಜಗನ್ಮಾನ್ಯವಾದ ಸನಾತನಧರ್ಮವು ದಿನೇ-ದಿನೇ ಖಿಲವಾಗುತ್ತಿರುವುದನ್ನು ಕಂಡು ಈ ಯೋಗಿವರೇಣ್ಯರ ದಯಾರ್ದ್ರ ಮನಸ್ಸು ಮರುಗಿತು. ಸಕಲ ಶಾಸ್ತ್ರಪಂಡಿತರಾದ ಇವರು ಸನಾತನ ಧರ್ಮಕ್ಕೆ ಕಾಯಕಲ್ಪ ಮಾಡುವ ಸಂಕಲ್ಪ ಕೈಗೊಂಡರು. ಅವರ ಈ ಸತ್ಸಂಕಲ್ಪದ ಫಲವೇ 'ಶ್ರೀಸದ್ವಿದ್ಯಾಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆ'. ಶ್ರೀ ಮಠದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಆಗಿನ ಮಹಾರಾಜರಿಗೆ ಶ್ರೀಶ್ರೀಗಳವರಿಂದ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಎಂಬ ಪಂಡಿತರ ಮೂಲಕ ರಾಯಸ ರವಾನೆ; ಭಾರತದಾದ್ಯಂತ ಇರುವ ರಾಜಮನೆತನಗಳವರ ನೆರವಿನ ಮಹಾಪೂರ. 'ಪಂಡಿತಪ್ರವರ'ರೆನಿಸಿದ್ದ ಬ್ರಹ್ಮಶ್ರೀ ವಿರೂಪಾಕ್ಷಶಾಸ್ತ್ರಿಗಳ ಮೇಲ್ವಿಚಾರಣೆ. 1895ರ ಮನ್ಮಥಸಂವತ್ಸರದ ಶ್ರಾವಣ ಶುಕ್ಲ ಷಷ್ಠೀ ಸ್ಥಿರವಾರ ಶುಭಗಳಿಗೆಯಲ್ಲಿ ಸ್ಥಾಪನೆ. ಇದು ನೂರಿಪ್ಪತ್ತು ವರ್ಷಗಳ ಹಿಂದೆ ಆರಂಭಗೊಂಡ ಈ ಸಂಸ್ಕೃತ ಮಹಾಪಾಠಶಾಲೆಯ ಹುಟ್ಟಿನ ಹಿನ್ನಲೆ.

## ಕಟ್ಟೆಚ್ಚರದ ಘೋಷಣೆ

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರ ನಂತರ ಮಹಾತಪಸ್ವಿಗಳೂ, ಶಾಸ್ತ್ರನಿಷ್ಣಾತರೂ, ಈ ಪಾಠಶಾಲೆಯ ಪ್ರಾಕ್ತನವಿದ್ಯಾರ್ಥಿಗಳೂ ಆದ ಶ್ರೀ ಚಂದ್ರಶೇಖರಭಾರತೀಗಳವರು (1912-1954) ಕಟ್ಟೆಚ್ಚರದಿಂದ ಈ ಪಾಠಶಾಲೆಯನ್ನು ಪೋಷಿಸಿದರು. ಅವರ ಉತ್ತರಾಧಿಕಾರಿಗಳೂ, ಜಗನ್ಮಾನ್ಯರೂ ಆದ ಶ್ರೀ ಅಭಿನವ ವಿದ್ಯಾತೀರ್ಥರು (1931-1989) ಈ ಪಾಠಶಾಲೆಗೆ ಕಾಯಕಲ್ಪ ಮಾಡಿದರು. ಪಾಠಶಾಲೆಯ ಹಳೆಕಟ್ಟಡ ನವೀಕರಣಗೊಂಡದ್ದು ಇವರ ಕಾಲದಲ್ಲಿ. ಅಧ್ಯಾಪಕರ ವೇತನವೃದ್ಧಿ, ವಿದ್ಯಾರ್ಥಿ ವೇತನದ ಹೆಚ್ಚಳ-ಇವೆಲ್ಲ ಇವರ ಕಾರುಣ್ಯದ, ಕಳಕಳಿಯ ಫಲ. ಈಗಲಂತೂ ಶಾಸ್ತ್ರ ಸಂಪನ್ನರೂ, ಪ್ರತಿಭೆ-ಪ್ರಭಾವಗಳ ಸಂಗಮಸ್ಥಾನರೂ ಆದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ತುಂಬ ಮುತುವರ್ಜಿ ವಹಿಸಿ ಈ ಪಾಠಶಾಲೆಯನ್ನು ಪೋಷಿಸಿಕೊಂಡು ಬರುತ್ತಿದ್ದಾರೆ.

## ಅಧ್ಯಯನ ವಿಧಾನ

ಉಪನೀತರಾಗಿ ಉಪಾಕರ್ಮಪೂರೈಸಿ, ವೇದಾಧ್ಯಯನಾಧಿಕಾರ ಹೊಂದಿದ ವಟುಗಳು ಪ್ರತಿವರ್ಷ (ಜ್ಯೇಷ್ಠ ಶುಕ್ಲ ಬಿದಿಗೆಯಂದು) ಈ ಪಾಠಶಾಲೆ ಸೇರುತ್ತಾರೆ. ಹೀಗೆ ಸೇರುವಾಗ ಅವರ ಅರ್ಹತೆಗ ಆಸಕ್ತಿಗಳನ್ನು ಪರೀಕ್ಷಿಸಲಾಗುತ್ತದೆ. ನಂತರ ಪಾಠ-ಪ್ರವಚನಗಳ ಆರಂಭ. ಮೊದಲವರ್ಷ 'ಮಹಾನ್ಯಾಸಾದಿ' ಎಂಬ ಗ್ರಂಥದಲ್ಲಿರುವ ವೇದಭಾಗಗಳು, ಅಮರಕೋಶ, ಸಂಸ್ಕೃತ ಶಬ್ದಗಧಾತು ರೂಪಗಳ ಪಾಠ; ದ್ವಿತೀಯಾದಶ, ರಾಮೋದನ್ತಗಮೊದಲಾದ ಆರಂಭಿಕ ಸಂಸ್ಕೃತ ಗ್ರಂಥಗಳ ಬೋಧನೆ. ನಂತರ ವಿದ್ಯಾರ್ಥಿಯ ಆಸಕ್ತಿಯನ್ನು ಗಮನಿಸಿ ವೇದ ಅಥವಾ ಸಾಹಿತ್ಯಭಾಗಕ್ಕೆ ಸೇರ್ಪಡೆ. ಐದು ವರ್ಷದ ಅವಧಿಯಲ್ಲಿ ಋಗ್ವೇದ ಅಥವಾ ಯಜುರ್ವೇದ ಸಂಹಿತೆಗಳ ಮೂಲಪಾಠ; ಇದೀಗ ಸಾಮವೇದದ ಅಧ್ಯಯನಕ್ಕೂ ಅವಕಾಶ; ಸಾಹಿತ್ಯ ಭಾಗಕ್ಕೆ ಸೇರಿದರೆ ನಾಟಕಾಂತ ಸಾಹಿತ್ಯದ ಅಧ್ಯಯನ. ಹಿಂದೆ ಪ್ರತಿ ವಿದ್ಯಾರ್ಥಿಯು ವೇದ-ಸಾಹಿತ್ಯಗಳೆರಡನ್ನೂ ಕಡ್ಡಾಯವಾಗಿ ಅಧ್ಯಯನ ಮಾಡಬೇಕಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಆಯ್ಕೆಗೆ ಅವಕಾಶ. ಸಾಹಿತ್ಯಾಧ್ಯಯನದ ನಂತರ ನ್ಯಾಯ-ವ್ಯಾಕರಣ-ಜ್ಯೋತಿಷ ಶಾಸ್ತ್ರಗಳ ಅಧ್ಯಯನಕ್ಕೆ ಸೂಕ್ತ ವ್ಯವಸ್ಥೆ. ವೇದಭಾಗದಲ್ಲಿ ಪದ-ಕ್ರಮಾದಿಗಳ ಅಧ್ಯಯನಕ್ಕೆ ಈ ಹಿಂದೆ ಶ್ರೀ ಮಠದ ಆಶ್ರಯದಲ್ಲಿ ನಡೆಯುವ ಕೇರಳದ ಕಾಲಟಿಕ್ಷೇತ್ರದಲ್ಲಿನ ಉನ್ನತಮಹಾಪಾಠಶಾಲೆಗೆ ಕಳುಹಲಾಗುತ್ತಿತ್ತು. ಈಗ ಇಲ್ಲಿಯೇ ಅವಕಾಶಕಲ್ಪಿಸಲಾಗಿದೆ.

(ಮುಂದುವರಿಯುವುದು)

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವ



ದಿನಾಂಕ 18-01-2015ನೇ ಭಾನುವಾರ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವವು ಶ್ರೀ ಜಯಪ್ರಕಾಶ ರಾವ್, ಉಳ್ತೂರು, ಇವರ "ಶ್ರೀ ಸಿದ್ಧಿ" ನಿಲಯದಲ್ಲಿ "ದಿ। ಉಳ್ತೂರು ಸಣ್ಣಮ್ಮ ತನಯ ತಮ್ಮಯ್ಯ" ವೇದಿಕೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗಿಸಿ ಶ್ರೀ ವಾಸುದೇವ ರಾವ್ ಉಳ್ತೂರು, ಇವರು ನೆರವೇರಿಸಿದರು. ಶ್ರೀ ಜಯಪ್ರಕಾಶ ರಾವ್ ಇವರು ಕಾರ್ಯಕ್ರಮದ ಪ್ರಾಯೋಜಕರಾಗಿದ್ದು, ಸರ್ವರನ್ನೂ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಸತ್ಯನಾರಾಯಣ ಹೆಬ್ಬಾರ ಮರೂರು, ಇವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ಇತ್ಯಾದಿಗಳನ್ನು ನೀಡಲಾಯಿತು. ಸಂಘದ ಸದಸ್ಯರಿಗಾಗಿ ವಿವಿಧ ಆಟೋಟ ಸ್ಪರ್ಧೆಗಳು, ಮತ್ತು ಅವರಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ಸಮಾವೇಶದಲ್ಲಿ ಅತಿಥಿಗಳಾಗಿ ಶ್ರೀ ಕೆ.ಮೋಹನ ಹೆಬ್ಬಾರ್, ಆಡಳಿತ ಮೊಕ್ತೇಸರರು, ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ, ಮೇಲುಮಠ, ಕಬ್ಬಿನಾಲೆ, ಶ್ರೀ ಸುಬ್ರಹ್ಮಣ್ಯ ಐತಾಳ, ಅಧ್ಯಕ್ಷರು, ದ್ರಾವಿಡ ಬ್ರಾಹ್ಮಣ ಪರಿಷತ್ತು ಕುಂದಾಪುರ ತಾಲೂಕು ಮತ್ತು ಶ್ರೀ ಮೋಹನ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರಿ, ಇವರುಗಳು ಭಾಗವಹಿಸಿ, ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ವತಿಯಿಂದ ತಾಲೂಕಿನ 6 ಮಂದಿ ಹಿರಿಯ ಸಮಾಜ ಬಾಂಧವರನ್ನು ಸನ್ಮಾನಿಸಲಾಯಿತು. ಶ್ರೀದಯಾನಂದ ರಾವ್, ಶ್ರೀ ಪ್ರಭಾಕರ ಮೇರ್ಟ ಇವರುಗಳು ಕಾರ್ಯಕ್ರಮಕ್ಕೆ ಸಹಕರಿಸಿದರು. ಶ್ರೀ ಪ್ರಕಾಶ ರಾವ್, ಬೈಂದೂರು, ಇವರು ಬಹುಮಾನಗಳ ಪ್ರಾಯೋಜಕರಾಗಿ ಸಹಕರಿಸಿದರು. ಶ್ರೀ ವೆಂಕಟೇಶ ರಾವ್ ಹೊಸ್ಕೋಟೆ, ಇವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ದಿ। ಉಳ್ತೂರು ಸಣ್ಣಮ್ಮ ತನಯ ತಮ್ಮಯ್ಯ ಸ್ಮರಣಾರ್ಥ ಪ್ರಶಸ್ತಿಯನ್ನು ಶ್ರೀ ಕೃಷ್ಣಮೂರ್ತಿ ಹೆಬ್ಬಾರ ನಾಯ್ಕನಕಟ್ಟೆ ಇವರಿಗೆ ಪ್ರದಾನಿಸಲಾಯಿತು. ಅಧ್ಯಕ್ಷರಾದ ಶ್ರೀ ಎ.ಗೋಪಾಲಕೃಷ್ಣ ಹೆಬ್ಬಾರರು ಮಾತನಾಡಿ, ಸಂಘದಿಂದ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೆ ಸರ್ವ ಸದಸ್ಯರ ಸಹಕಾರ ಇದೇ ರೀತಿಯಾಗಿ ಮುಂದೆಯೂ ಇರಲೆಂದು ಆಶಿಸಿದರು. ಸ್ಥಾನಿಕ ಮಹಾಸಭಾದ ಕೋಶಾಧ್ಯಕ್ಷರಾದ ಶ್ರೀ ಜಿ.ಕೆ. ಕೋಲ್ಪೆಯವರು ಸಂದರ್ಭೋಚಿತವಾಗಿ ಮಾತನಾಡಿ ಸಲಹೆಗಳನ್ನಿತ್ತರು. ಸ್ಥಾನಿಕ ಮಹಾಸಭಾದ ಗೌರವಾಧ್ಯಕ್ಷ ಶ್ರೀ ಉಮೇಶ ಶ್ಯಾನುಭಾಗ್ ಹಾಗೂ ಸಂಘದ ಗೌರವಾಧ್ಯಕ್ಷರಾದ ಶ್ರೀ ಗಣೇಶ ರಾವ್, ಕುಂಭಾಸಿ ಇವರುಗಳು ಉಪಸ್ಥಿತರಿದ್ದರು. ಪ್ರಾಯೋಜಕರಾದ ಶ್ರೀ ಜಯಪ್ರಕಾಶರಾವ್ ದಂಪತಿಗಳನ್ನು ಸನ್ಮಾನಿಸಲಾಯಿತು. ಶ್ರೀಮತಿ ಸುಮಾ ಜಯಪ್ರಕಾಶ್‌ರವರು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಪ್ರಭಾಕರರಾವ್, ಇವರು ಧನ್ಯವಾದ ಸಮರ್ಪಿಸಿದರು.

ವರದಿ : ಶ್ರೀ ಮ.ನಾ.ಹೆಬ್ಬಾರ್.


ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## 2009ರ ಫಾರ್ಮುಲಾ ಕಾರು ರೇಸ್ "ರಾಷ್ಟ್ರೀಯ ಚಾಂಪಿಯನ್" ಸುದರ್ಶನ ರಾವ್ ಕರ್ವಾಲು : ಈ ಬಾರಿ 3ನೇ ಸ್ಥಾನಕ್ಕೆ



ಮೂಲತ: ಕಾರ್ಕಳ ತಾಲೂಕಿನ ನೀರೆಬೈಲೂರು ಕರ್ವಾಲಿನವರಾದ ಫಾರ್ಮುಲಾ ಕಾರ್ ರೇಸಿನ ವೇಗಿ ಸುದರ್ಶನ ರಾವ್ ಕರ್ವಾಲ್ 14-12-2014ರಂದು ದೆಹಲಿಯ ನೋಯ್ಡಾದಲ್ಲಿ ಹೊಸದಾಗಿ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಗುಣಮಟ್ಟದ ಸರ್ಕ್ಯೂಟ್‌ನಲ್ಲಿ ನಡೆದ J.K. TYRES NATIONAL RACING CHAMPIONSHIP (LGB Formula-4)ನಲ್ಲಿ ದ್ವಿತೀಯ ರನ್ನರ್ ಅಪ್ ಸ್ಥಾನ ಗಳಿಸಿದ್ದಾರೆ.

ಜೆಟ್ ಏರ್‌ವೇಸ್‌ನಲ್ಲಿ ಕಮರ್ಷಿಯಲ್ ಪೈಲಟ್ ಆಗಿ ಉದ್ಯೋಗ ದೊರಕಿದ ನಂತರವೂ ಕಾರು ರೇಸಿನ ಹವ್ಯಾಸವನ್ನು ಮುಂದುವರೆಸುತ್ತಿರುವ ಸುದರ್ಶನ ರಾವ್ ಕರ್ವಾಲ್‌ರವರು ಈ ರಾಷ್ಟ್ರೀಯ ರೇಸಿಂಗ್‌ನ 12 ಸ್ಪರ್ಧೆಗಳಲ್ಲಿ ಭಾಗವಹಿಸಿ ಅಂತಿಮವಾಗಿ ದ್ವಿತೀಯ ರನ್ನರ್ ಅಪ್ ಸ್ಥಾನ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ 12 ಸ್ಪರ್ಧೆಗಳಲ್ಲಿ ಎದುರಾಳಿಗಳಿಂದ ತೀವ್ರವಾದ ಪೈಪೋಟಿಯನ್ನೆದುರಿಸಿಯೂ 1 ಸ್ಪರ್ಧೆಯಲ್ಲಿ ಮೊದಲನೇ ಸ್ಥಾನವನ್ನೂ, 4 ಸ್ಪರ್ಧೆಗಳಲ್ಲಿ ಎರಡನೇ ಸ್ಥಾನವನ್ನೂ ಗಳಿಸಿ, ಒಟ್ಟು ಅಂಕಗಳ ಆಧಾರದಲ್ಲಿ ದ್ವಿತೀಯ ರನ್ನರ್ ಅಪ್ ಸ್ಥಾನ ಗಳಿಸಿದರು.

ಶ್ರೀ ಸುದರ್ಶನ ರಾವ್ ಕರ್ವಾಲ್ ಇವರು ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಕರ್ವಾಲು ಶಂಕರನಾರಾಯಣ ರಾವ್ ಮತ್ತು ಶ್ರೀಮತಿ ಸಂಧ್ಯಾ ರಾವ್ ದಂಪತಿಗಳ ಪುತ್ರರಾಗಿದ್ದು, ಇವರ ಈ ವಿಶೇಷ ಸಾಧನೆಗಾಗಿ ಶ್ರೀ ಶಾರದಾ ಅಭಿನಂದನೆಗಳು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.09-03-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.23-02-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.14-03-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶಾಸ್ತ್ರೀಯ ಸಂಗೀತ ಪರೀಕ್ಷೆ : ಡಿಸ್ಟಿಂಕ್ಷನ್



**ಕು। ಗಾನ ಪಿಲಿಂಜ**

ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ 2014ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತ ಪರೀಕ್ಷೆಯಲ್ಲಿ ಪುತ್ತೂರು ನೆಹರೂ ನಗರದ ಗಾನ ಸರಸ್ವತಿ ಸಂಗೀತ ಕಲಾ ಶಾಲೆಯ ಕು। ಗಾನ ಪಿಲಿಂಜ ರವರು ಶೇ.89 ಅಂಕಗಳಿಸಿ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಯಾಗಿದ್ದಾರೆ. ಇವರು ವಿದುಷಿ ವೀಣಾ ರಾಘವೇಂದ್ರರವರ ಶಿಷ್ಯೆ ಹಾಗೂ ಸುದಾನ ವಸತಿಯುತ ಆಂಗ್ಲಮಾಧ್ಯಮ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿ. ಇವರು ಪುತ್ತೂರಿನ ಮಂಗಳಾ ಡೆಕೋರೇಟರ್‌ನ ಶ್ರೀ ಮೋಹನ್‌ದಾಸ್ ಪಿಲಿಂಜ ಮತ್ತು ಶ್ರೀಮತಿ ಗಾಯತ್ರಿ ಪಿಲಿಂಜ ದಂಪತಿಗಳ ಪುತ್ರಿ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು

## ಸನ್ಮಾನ : ಶ್ರೀ ರಾಮಣ್ಣ ಹೆಬ್ಬಾರ್



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅಚ್ಚಡ ಕಟಪಾಡಿ ಇದರ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ಶಾಲೆಯಲ್ಲಿ ಸುದೀರ್ಘ ಅವಧಿಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಶ್ರೀ ರಾಮಣ್ಣ ಹೆಬ್ಬಾರ್ ಇವರನ್ನು ಶಾಲು ಹಾರ, ಸ್ಮರಣಿಕೆ ನೀಡಿ ಸನ್ಮಾನ ಮಾಡಲಾಯಿತು.

## ನೂತನ ಶೋಭಾ ಡಿಜಿಟಲ್ ಸ್ಟುಡಿಯೋ : ಶುಭಾರಂಭ



ಜೀವನೋಪಾಯದ ವೃತ್ತಿಯೊಂದಿಗೆ ಕಲಾಸೇವೆಯೂ ಅಗತ್ಯ. ಆಗ ವ್ಯಕ್ತಿತ್ವ ಪರಿಪೂರ್ಣವಾಗುತ್ತದೆ. ಉದ್ಯಮ ಸ್ವಂತಕ್ಕೆ ಮಾತ್ರವಲ್ಲದೇ ಪರಿಸರಕ್ಕೂ ಶೋಭಾಯಮಾನವಾಗಿ ಬೆಳೆಯಲಿ ಎಂದು ಪೇಜಾವರ ಶ್ರೀ ಅಧೋಕ್ಷಜ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ನುಡಿದರು. ಅವರು ಬೆಳುವಾಯಿಯ ಶೋಭಾ ಡಿಜಿಟಲ್ ಸ್ಟುಡಿಯೋ ಇದರ 20ನೇ ವರ್ಷದ ಸಂಭ್ರಮದ ಸಂದರ್ಭದಲ್ಲಿ ಸೆಂಟ್ರಲ್ ಕಾಂಪ್ಲೆಕ್ಸ್‌ನ ಸ್ವಂತ ಕಟ್ಟಡದಲ್ಲಿ ನೂತನ ಸ್ಟುಡಿಯೋವನ್ನು ಶುಭಾರಂಭಗೊಳಿಸಿ ಆಶೀರ್ವಚಿಸಿದರು. ಶ್ರೀಮತಿ ಅಂಜನಾ ಸುಬ್ರಾಯ ಭಟ್ ನೂತನ ಸ್ಟುಡಿಯೋದ ಉದ್ಘಾಟನೆಯನ್ನು ನೆರವೇರಿಸಿದರು.

ಸ್ಟುಡಿಯೋದ ಮಾಲಕರಾದ ಶ್ರೀ ದೇವಾನಂದ ಭಟ್ ಇವರಿಗೆ ಸರ್ವವಿಧದಲ್ಲಿ ಸಹಕಾರ ನೀಡಿದ ಗಣ್ಯರನ್ನು ಸನ್ಮಾನಿಸಲಾಯಿತು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ। ಎಮ್.ಮೋಹನ್ ಆಳ್ವರು ಸಮಾರಂಭದಲ್ಲಿ ಪಾಲ್ಗೊಂಡು ಶುಭ ಹಾರೈಸಿದರು. ಪ್ರಾರಂಭದಲ್ಲಿ ಕು। ಶುಭಾಂಜನ ಪ್ರಾರ್ಥನೆಗೈದರು. ಪ್ರವರ್ತಕರಾದ ಎಮ್.ದೇವಾನಂದ ಭಟ್ ಸ್ವಾಗತಿಸಿದರು. ಉಜಿರೆ ಅಶೋಕ್ ಭಟ್ ಕಾರ್ಯಕ್ರಮ ನಿರೂಪಿಸಿ, ಕಾಂತಾವರ ಮಹಾವೀರ ಪಾಂಡಿ ವಂದಿಸಿದರು. ಶ್ರೀಮತಿ ವೀಣಾ ಭಟ್, ಮಾ। ದಿವಿಜೇಶ್ ಉಪಸ್ಥಿತರಿದ್ದರು. ರಾತ್ರಿ ಶ್ರೀ ಕಟೀಲು ಮೇಳದವರಿಂದ ''ಶ್ರೀದೇವಿ ಮಹಾತ್ಮೆ'' ಯಕ್ಷಗಾನ ಬಯಲಾಟ ಜರಗಿತು.

## ಮಾಂಗಲ್ಯಂ ತಂತುನಾನೇನ ....

ಸುರತ್ಕಲ್ ತಡಂಬೈಲ್ ಶ್ರೀಮತಿ ಉಷಾರಾವ್ ಮತ್ತು ಶ್ರೀ ಪ್ರಭಾಕರರಾವ್ ಇವರ ಪುತ್ರ **ಸೂರಜ್ ಕುಮಾರ್** ಹಾಗೂ ಶ್ರೀಮತಿ ರೋಹಿಣಿದೇವಿ ಮತ್ತು ಶ್ರೀ ದೇಶಕೋಡಿ ಶ್ರೀನಿವಾಸರಾವ್ ಇವರ ಪುತ್ರಿ **ಶುಷ್ಮಾ** ಇವರ ವಿವಾಹವು ತಾ.25-01-2014 ರಂದು ಸುಳ್ಯದ ಶ್ರೀ ಶಿವಕೃಪಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಸಾಗರ ಕವಲಕೋಡು ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀ ತಿರುಮಲೇಶ್ವರ ಕೆ ವಿ ಇವರ ಪುತ್ರ **ಗಿರೀಶ್** ಹಾಗೂ ಉಡುಪಿ ಅಂಬಲಪಾಡಿಯಲ್ಲಿರುವ ಕರ್ವಾಲು ಶ್ರೀಮತಿ ಮತ್ತು ಶ್ರೀ ವೇಣುಗೋಪಾಲ ರಾವ್ ಇವರ ಪುತ್ರಿ **ಸ್ವಾತಿ** ಇವರ ವಿವಾಹವು ದಿನಾಂಕ 08-02-2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಸಂಧ್ಯಾರಾವ್ ಮತ್ತು ಶ್ರೀ ವೈ ವಿ ಕೇಶವ ರಾವ್ ಇವರ ಪುತ್ರ **ಅನೀಶ್** ಹಾಗೂ ಶ್ರೀಮತಿ ಶಾರದಾ ಮತ್ತು ಪರಾರಿ ಶ್ರೀ ರಾಮಪ್ರಸಾದ್ ರಾವ್ ಇವರ ಪುತ್ರಿ **ಪೂಜಾ** ಇವರ ವಿವಾಹವು ತಾ.09-02-2015 ರಂದು ಮಂಗಳೂರಿನ ಸುಜೀರ್ ಸಿ ವಿ ನಾಯಕ್ ಸಭಾಭವನದಲ್ಲಿ ನೆರವೇರಿತು.

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 13-02-2015 | ಕುಂಭ ಸಂಕ್ರಮಣ, |
| 15-02-2015 | ಸರ್ವೈಕಾದಶೀ |
| 16-02-2015 | ಪ್ರದೋಷಃ |
| 17-02-2015 | ಮಹಾ ಶಿವರಾತ್ರಿ |
| 18-02-2015 | ಅಮವಾಸ್ಯಾ, |
| 19-02-2015 | ಶತಭಿಷ ನಕ್ಷತ್ರಾರಂಭ |
| 01-03-2015 | ಸರ್ವೈಕಾದಶೀ, |
| 02-03-2015 | ಪ್ರದೋಷಃ |
| 04-03-2015 | ಪೂರ್ವಾಭಾದ್ರಾ ನಕ್ಷತ್ರಾರಂಭ |
| 05-03-2015 | ಪೂರ್ಣಿಮಾ, |
| 09-03-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.34ಕ್ಕೆ |
| 14-03-2015 | ಮೀನ ಸಂಕ್ರಮಣ, |

## ನಿಧನ

### ಪಿ. ಚಂದ್ರಶೇಖರ್ ರಾವ್

ಪಿ. ಚಂದ್ರಶೇಖರ್ ರಾವ್ (82 ವರ್ಷ) ಕೊಡವೂರು ಇವರು ತಾ 22.01.2015ರಂದು ಬೆಂಗಳೂರಿನ ತಮ್ಮ ಮಗನ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

ಚಂದ್ರಶೇಖರರಾಯರು ಕೊಡವೂರಿನಲ್ಲಿ ನಿವೃತ್ತ ಶಿಕ್ಷಕರಾಗಿದ್ದು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದರು. ಅವರ ನಿಧನಕ್ಕೆ ಉಡುಪಿಯ ಸಂಘವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

### ಶಾಂತಿ ಉದ್ಯಾವರ್

ಬೆಂಗಳೂರಿನ ರಾಜಾಜಿನಗರದಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಸ್ಕಂದಸ್ವಾಮಿ ಉದ್ಯಾವರ್ ಇವರ ಧರ್ಮಪತ್ನಿ ಶಾಂತಿ ಉದ್ಯಾವರ್ (67 ವರ್ಷ )ಇವರು ದಿನಾಂಕ 19-12-2014ರಂದು ನಿಧನರಾದರು. ಮೃತರು ಪತಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

### ವಿಜಯ ಕುಮಾರ್ ಬೊಕ್ಕಸ

ಮೂಡಬಿದ್ರೆಯ ವಿಜಯ ಕುಮಾರ್ ಬೊಕ್ಕಸ (60 ವರ್ಷ) ಇವರು ದಿನಾಂಕ 28-12-2014ರಂದು ಸ್ವಗೃಹದಲ್ಲಿ ನಿಧನರಾದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಉದ್ಯೋಗಿಯಾಗಿದ್ದ ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನ ಜೀರ್ಣೋದ್ಧಾರ ಸಮಿತಿ

**ಮಿತ್ತಬಾಗಿಲು ಗ್ರಾಮ, ಅಂಚೆ ಕಿಲ್ಲೂರು–574214 ಬೆಳ್ತಂಗಡಿ, ದ ಕ**

ಅತೀ ಪುರಾತನ ದೇವಸ್ಥಾನಗಳಲ್ಲಿ ಒಂದಾದ ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನದಲ್ಲಿ 1999ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ತುರ್ತುಕಾಮಗಾರಿಗಳು ನಡೆದು ಬ್ರಹ್ಮಕಲಶಾದಿಗಳು ನೆರವೇರಿತ್ತು. ಇದೀಗ ಜೀರ್ಣಗೊಂಡಿರುವ ಕಟ್ಟಡಗಳ ನವನಿರ್ಮಾಣ ಅಲ್ಲದೆ ಸುತ್ತುಪೌಳಿ, ಮುಖ ಮಂಟಪ, ಗೋಪುರ, ಪಾಕಶಾಲೆ, ಭೂತದಕೋಣೆ, ಅಶ್ವತ್ಥಕಟ್ಟೆ, ನಾಗನಕಟ್ಟೆ ಮೊದಲಾದುವುಗಳ ರಚನೆಯನ್ನು ಮಾಡುವ ಸಲುವಾಗಿ ಜೀರ್ಣೋದ್ಧಾರ ಸಮಿತಿಯೊಂದನ್ನು ರಚಿಸಿದ್ದು, ಇದಕ್ಕಾಗಿ ಸುಮಾರು 40ರಿಂದ 50ಲಕ್ಷ ರೂ.ಗಳವರೆಗೆ ಧನ ಸಂಗ್ರಹಿಸುವ ಅಗತ್ಯವಿದೆ. ಅನೇಕ ಕಾಮಗಾರಿಗಳು ಪ್ರಗತಿಯಲ್ಲಿದೆ. ಮುಂದಿನ ಕೆಲಸ ಕಾರ್ಯಗಳು ನಡೆಯುವ ಸಲುವಾಗಿ ಭಕ್ತಾದಿಗಳ ತನು ಮನ ಧನದ ಸಹಕಾರವನ್ನು ಸಮಿತಿಯು ಅಪೇಕ್ಷಿಸುತ್ತದೆ.

**ಧನಸಹಾಯ ನೀಡುವವರು ಸಿಂಡಿಕೇಟ್ ಬ್ಯಾಂಕ್ ಬಂಗಾಡಿಶಾಖೆ ಖಾತೆ ನಂ 01982200009214 ಕ್ಕೆ ಜಮಾ ಮಾಡಬಹುದು. ಸಂಪರ್ಕ ದೂರವಾಣಿ–9481755201, 9480055581, 9482250366**

## ಸ್ಥಾನಿಕ ಬ್ರಾಹ್ಮಣ ವಧೂವರರ ಮಾಹಿತಿ : ಅಂತರ್‌ಜಾಲದಲ್ಲಿ

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಂಗಳೂರು ಇದರ ವಿವಾಹ ಸಮಿತಿಯು ಸ್ಥಾನಿಕ ಬಂಧುಬಾಂಧವರ ವಧೂವರರ ಮಾಹಿತಿಯನ್ನು ಯಾವುದೇ ಶುಲ್ಕವಿಲ್ಲದೆ ಪ್ರಕಟಿಸಲು ಮತ್ತು ಅಗತ್ಯವಿರುವವರಿಗೆ ವಿವರಗಳನ್ನು ತಲುಪಿಸಲು ಅನುಕೂಲವಾಗುವಂತೆ ಅಂತರ್‌ಜಾಲದಲ್ಲಿ (ಇಂಟರ್‌ನೆಟ್) ಜಾಲತಾಣವನ್ನು (ವೆಬ್‌ಸೈಟ್) ಸಮಾಜದ ಸದಸ್ಯರಿಂದಲೇ ಪ್ರಾರಂಭಿಸಿದ್ದು ಈ ಜಾಲತಾಣವನ್ನು ದಿನಾಂಕ 28-12-2014ರಂದು ಬೆಂಗಳೂರಿನ ಕೊಡಿಗೆಹಳ್ಳಿಯ ಜ್ಞಾನಶಕ್ತಿ ಮಂಟಪದಲ್ಲಿ ನಡೆದ ಸಂಘದ ವಾರ್ಷಿಕ ಸಭೆಯಲ್ಲಿ ಉದ್ಘಾಟಿಸಲಾಗಿದೆ.

ಸಮಾಜಬಾಂಧವರು ಈ ಜಾಲತಾಣದ ಮೂಲಕ ಸುಲಭವಾಗಿ ವಧೂವರರ ವಿವರಗಳನ್ನು ಸ್ವತಃ ಪ್ರಕಟಿಸಬಹುದಲ್ಲದೇ ಇತರರೂ ಪ್ರಕಟಿಸಿದ ವಿವರಗಳನ್ನು ವೀಕ್ಷಿಸಲೂಬಹುದು. ಅದಕ್ಕಾಗಿ www.sthanika.info ಜಾಲತಾಣದಲ್ಲಿ ತಮ್ಮನ್ನು ಸದಸ್ಯರಾಗಿ ಸೇರ್ಪಡೆಗೊಳಿಸಿಕೊಳ್ಳಬಹುದು.

ಇನ್ನೂ ಹೆಚ್ಚಿನ ಮಾಹಿತಿಗಾಗಿ ಸಮಾಜ ಬಾಂಧವರು marriage@sthanika.infoಗೆ ಇ-ಮೇಲ್ ಮೂಲಕ ಸಂಪರ್ಕಿಸಬಹುದು. ಅಲ್ಲದೇ ಈ ಕೆಳಗಿನವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ವಿಚಾರಿಸಿಕೊಳ್ಳಬಹುದು.

**ಸುಬ್ರಹ್ಮಣ್ಯ ಸಿ.ಆರ್.9740022733, ರಮಾನಾಥ ರಾವ್ 9448933425**
**ಗುರುಪ್ರಸಾದ್ ರಾವ್ 9448912069**

### ತಪ್ಪು–ತಿದ್ದುಪಡಿ

ಕಳೆದ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ 'ಪ್ರವಾಸ ಕಥನ'ದ ಲೇಖಕಿಯ ಹೆಸರು ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಎಂದು ಓದಿಕೊಳ್ಳಬೇಕೆಂದು ವಿನಂತಿ.

॥ಶ್ರೀ ಗುರುಭ್ಯೋನಮಃ॥

ಸಮಾಜ ಬಾಂಧವರೇ,

ಇದೇ ಬರುವ ದಿ. 12-04-2015ನೇ ಆದಿತ್ಯವಾರದಿಂದ 19-04-2015ರವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ, ಹೆಜಮಾಡಿ ಕೃಷ್ಣರಾಜಭಟ್ ಇವರ ನೇತೃತ್ವದಲ್ಲಿ ಸ್ಥಾನಿಕ ಸಭಾ (ರಿ.) ಪಡುಬಿದ್ರೆ ಇದರ ಉಸ್ತುವಾರಿಯಲ್ಲಿ

## ಸಂಸ್ಕೃತ ವೇದಪಾಠಶಾಲೆ ಮತ್ತು ವೈದಿಕ ಶಿಬಿರವು

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯಲಿರುವುದು. ಇದರ ಪ್ರಾಯೋಜಕತ್ವವನ್ನು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.) ಕುಕ್ಕಿಕಟ್ಟೆ ಉಡುಪಿ., ಎಬಿಸಿಡಿ&ಇ ಟ್ರಸ್ಟ್ (ರಿ.) ಇನ್ನ ಸಾಲ್ದಾನಾ ಹೆರಿಟೇಜ್, ಇನ್ನ ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ ಇವರು ವಹಿಸಿಕೊಳ್ಳಲಿದ್ದಾರೆ. ಇದಲ್ಲದೆ ಸಮಾಜ ಬಾಂಧವರ ಸಹಕಾರವನ್ನೂ ಬಯಸುತ್ತದೆ. ಇದನ್ನು ಸಾಕಾರಗೊಳಿಸಲು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ವಟುಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿ.

**(7ದಿನವೂ ವಟುಗಳಿಗೆ ಊಟೋಪಚಾರ ಹಾಗೂ ತಂಗುವ ವ್ಯವಸ್ಥೆ ಇದೆ.)**

**ಸಂಪರ್ಕಿಸಬೇಕಾದ ದೂರವಾಣಿ**

ಡಾ। ವೈ. ಸುದರ್ಶನ್ ರಾವ್, ಕುಕ್ಕಿಕಟ್ಟೆ, ಉಡುಪಿ–9845136322, ಶ್ರೀ ಗಣೇಶ್ ಭಟ್, ಅರ್ಚಕರು, ಪಾದೆಬೆಟ್ಟು, 9449905918, ಶ್ರೀ ಕೃಷ್ಣರಾಜ ಭಟ್, ಅರ್ಚಕರು. ಹೆಜಮಾಡಿ–9980195355, ಐ. ಲಕ್ಷ್ಮೀಕಾಂತ ರಾವ್, 'ಇನ್ನ ಸಾಲ್ದಾನಾ ಹೆರಿಟೇಜ್'–9448156413, ಸುಧಾಕರ್ ಬೆಳ್ಳೆ, ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ–9845193103

### ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)

ಕುಕ್ಕಿಕಟ್ಟೆ ಉಡುಪಿ.,

ಸಮಾಜ ಬಾಂಧವರೇ,

ವಯೋಮಿತಿಯ ನಿರ್ಬಂಧವಿಲ್ಲದೆ ತಮ್ಮ ಬಿಡುವಿನ ವೇಳೆಯಲ್ಲಿ ವೈದಿಕ ಉಡುಗೆ ತೊಡುಗೆ, ಭಸ್ಮ ಧಾರಣೆ, ಜಪ, ಪೂಜಾವಿಧಿ ಇತ್ಯಾದಿಗಳನ್ನು ಕಲಿಯಬಯಸಿದಲ್ಲಿ ವರ್ಷವಿಡೀ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ಕೃಷ್ಣರಾಜಭಟ್ ಹಾಗೂ ಶ್ರೀ ಗಣೇಶ್ ಭಟ್ ಇವರ ನೇತೃತ್ವದಲ್ಲಿ ಕಲಿಸಿಕೊಡಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಸಂಸ್ಥೆಯು ಆಶಿಸುತ್ತದೆ.

ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ :

ಡಾ। ವೈ. ಸುದರ್ಶನ್ ರಾವ್, ನಿರ್ದೇಶಕರು, ಕುಕ್ಕಿಕಟ್ಟೆ, ಉಡುಪಿ–9845136322, ಶ್ರೀ ಗಣೇಶ್ ಭಟ್, ಅರ್ಚಕರು, ಪಾದೆಬೆಟ್ಟು, 9449905918, ಶ್ರೀ ಕೃಷ್ಣರಾಜ ಭಟ್, ಅರ್ಚಕರು. ಹೆಜಮಾಡಿ–9980195355


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್– 9886629697, 9986119865**

ಪ್ರೊ : ಸುಧಾಕರ್ ರಾವ್ ಬೆಳ್ಳೆ



## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (O), Mobile : 9845149521**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556 9483913344



## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೋ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com